ಕೃಷಿ ರಾಸಾಯನಿಕ ಮತ್ತು ಕ್ರಿಮಿ ನಾಶಕಗಳಿಂದ ಆಗುವ ದುಷ್ಪರಿಣಾಮ.

1637-ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಬಳಸುವ ಕ್ರಿಮೀನಾಶಕಗಳ ಮತ್ತು ರಾಸಾಯನಿಕ ಗೊಬ್ಬರಗಳ ವರ್ಷವಾರು ಪ್ರಮಾಣವೆಷ್ಟು?

ಆ) ಅನಾವಶ್ಯಕವಾಗಿ ಅತಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಜೈವಿಕ ಗೊಬ್ಬರಗಳ ಬದಲಾಗಿ ರಾಸಾಯನಿಕ ಗೊಬ್ಬರ ಅಥವಾ ಕ್ರಿಮಿನಾಶಕಗಳನ್ನು ಬಳಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಂತಹ ವಸ್ತುಗಳ ಬಳಕೆಯಿಂದ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು ನಿಜವಲ್ಲವೇ?

ಈ) ಸರ್ಕಾರವು ಇಂತಹ ಕೆಲವು ಅನಗತ್ಯ ವಸ್ತುಗಳ ಬಳಕೆಯ ಹತೋಟಿಗೆ ಕೈಗೊಂಡ ಹಾಗು ಕೈಗೊಳ್ಳುವ ಕ್ರಮಗಳು ಯಾವುವು? (ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ವರ್ಷ ಬಳಸುವ ಕ್ರಿಮಿನಾಶಕಗಳ ಪ್ರಮಾಣ, ಪುಡಿ ಅಥವಾ ಹರಳು 3187 ಮೆ.ಟನ್ ಹಾಗೂ ದ್ರವ ರೂಪದಲ್ಲಿ 1685 ಕಿ. ಲೀಟರುಗಳು ಹಾಗು ರಾಸಾಯನಿಕ ಗೊಬ್ಬರಗಳ ಪ್ರಮಾಣ.

ಸಾರಜನಕ 6999 ಮೆ. ಟನ್, ರಂಜಕ 2648 ಮೆ.ಟನ್ ಹಾಗು ಪೊಟ್ಯಾಷ್ 4636 ಮೆ. ಟನ್‌ಗಳು.

ಆ) ಇಲ್ಲ

ಇ) ಅನಾವಶ್ಯಕವಾಗಿ ಶಿಫಾರಸ್ಸು ಮಾಡಿದ ಪ್ರಮಾಣಕ್ಕಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಕೀಟನಾಶಕಗಳನ್ನು ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಈ) ಅನಾವಶ್ಯಕವಾಗಿ ಹೆಚ್ಚಿನ ಕೀಟನಾಶಕಗಳು ಹಾಗೂ ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡಲು ಜೈವಿಕ ಪೀಡೆನಾಶಕಗಳ ಹಾಗೂ ಜೈವಿಕ ಗೊಬ್ಬರಗಳನ್ನು ಬಳಸಲು ರೈತರಿಗೆ ಉತ್ತೇಜನ ನೀಡಲಾಗುತ್ತಿದೆ.

ವಿವಿಧ ಬೆಳೆಗಳ ಪೀಡೆಗಳ ಹತೋಟಿಗಾಗಿ ಸಮಗ್ರ ಪೀಡ ನಿರ್ವಹಣಾ ಕ್ರಮಗಳನ್ನು ಅನುಸರಿಸಲಾಗುತ್ತಿದೆ.